## ಕ್ಯಾರಿಕೇಚರ್ ಎಂದರೇನು?

ಕ್ಯಾರಿಕೇಚರ್ ಅಥವಾ ವ್ಯಂಗ್ಯ ಭಾವಚಿತ್ರ ಎನ್ನುವುದು ವ್ಯಕ್ತಿಯೊಬ್ಬನ ಕೆಲವು ಲಕ್ಷಣಗಳನ್ನು ಉತ್ಪ್ರೇಕ್ಷೆಗೊಳಿಸುವ, ನೋಡಿದಾಕ್ಷಣ ಅದೇ ವ್ಯಕ್ತಿಯದೇ ಚಿತ್ರವೆಂದು ಗುರುತಿಸುವಂತೆ ರಚಿಸಿರುವ ಚಿತ್ರ. ಸಾಮಾನ್ಯವಾಗಿ ವ್ಯಂಗ್ಯಚಿತ್ರಗಳಂತೆ ಕ್ಯಾರಿಕೇಚರ್ ಸಹ ನೋಡಿದಾಕ್ಷಣ ನಗು ತರಿಸುತ್ತವೆ.

ಕ್ಯಾರಿಕೇಚರ್ ಕಲೆ 16–17ನೇ ಶತಮಾನದಲ್ಲಿ ಒಂದು ಕಲಾಪ್ರಕಾರವಾಗಿ ಹೆಚ್ಚು ಜನಪ್ರಿಯವಾಯಿತು. ಅಂದು ಕಲಾವಿದರು ಇದ್ದಿಲು, ಪೆನ್ಸಿಲ್, ಬಣ್ಣಗಳನ್ನು ಬಳಸಿ ಕ್ಯಾರಿಕೇಚರ್ ರಚಿಸುತ್ತಿದ್ದರೆ ಇಂದು ಬಹಳಷ್ಟು ಕಲಾವಿದರು ಡಿಜಿಟಲ್ ಮಾಧ್ಯಮ ಹಾಗೂ ತಂತ್ರಾಂಶಗಳನ್ನು ಬಳಸುತ್ತಿದ್ದಾರೆ.

ಕ್ಯಾರಿಕೇಚರ್‌ನ ಮೂಲವನ್ನು ಲಿಯೊನಾರ್ಡೊ ಡಾ ವಿಂಚಿಯ ಕಲಾನೇಷ್ವಣೆಯಲ್ಲಿ ಗುರ್ತಿಸಲಾಗುತ್ತದೆ. ಡಾ ವಿಂಚಿಯ ತತ್ವ ಮತ್ತು ವಿಧಾನಗಳನ್ನು ವಿರೋಧಿಸಿದ ಕೆಲವು ಕಲಾವಿದರು ಕ್ಯಾರಿಕೇಚರ್‌ಗಳನ್ನು ‘ಪ್ರತಿರೋಧ ಕಲೆ’ ಎಂದೂ ಕರೆದರು. ವ್ಯಂಗ್ಯ ಭಾವಚಿತ್ರಕಾರರು ಮೊದಲಿನಿಂದಲೂ ತಮ್ಮ ಕುಂಚ, ಬಣ್ಣಗಳಿಂದ ಬರಹಗಾರರಿಗಿಂತ ಹೆಚ್ಚು ಪ್ರಭಾವ ಬೀರುವವರಾಗಿದ್ದರು. ಆಗ ಅಕ್ಷರಸ್ಥರು ಕಡಿಮೆ ಇದ್ದು, ಓದುವವರನ್ನು ಮಾತ್ರ ತಲುಪುತ್ತಿದ್ದ ಬರಹಗಳಿಗಿಂತ ಎಲ್ಲರನ್ನೂ ತಲುಪಬಲ್ಲಂತಹ ಕ್ಯಾರಿಕೇಚರ್‌ಗಳು ಹೆಚ್ಚು ಪರಿಣಾಮಕಾರಿಯಾಗಿದ್ದವು. ಬ್ರಿಟಿಷ್ ಕಲಾವಿದ ಜೇಮ್ಸ್ ಗಿಲ್‌ರೇ ಕುರಿತಂತೆ, ‘ನನ್ನ ಅವನತಿಗೆ ಯೂರೋಪಿನ್ ಎಲ್ಲಾ ಸೈನ್ಯಗಳು ಮಾಡುವ ಹಾನಿಗಿಂತ ಹೆಚ್ಚು ಹಾನಿಯನ್ನು ಗಿಲ್‌ರೇ ಮಾಡಿದ್ದಾನೆ’ ಎಂದು ಫ್ರಾನ್ಸ್‌ನ ನೆಪೋಲಿಯನ್ ಬೋನಾಪಾರ್ಟೆ ಹೇಳಿದ್ದನಂತೆ.





ವ್ಯಂಗ್ಯಚಿತ್ರಕಾರ ಯಾವುದೇ ಒತ್ತಡಗಳಿಗೆ ಮಣಿಯಬಾರದು. ವ್ಯಂಗ್ಯಚಿತ್ರಕಾರನ ವೃತ್ತಿಯೇ ಅಪಾಯಗಳಿಂದ ಕೂಡಿರುವಂಥದು. ನಾವೇ ಅಪಾಯಗಳನ್ನು ರಚಿಸುತ್ತೇವೆ ಹಾಗೂ ಅವುಗಳನ್ನು ಎದುರಿಸುತ್ತೇವೆ. ಹೆದರಿಕೆ ಇದ್ದೇ ಇರುತ್ತದೆ ನಿಜ, ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡಲು ಹೋರಾಡಲೇ ಬೇಕು.

–ಆಂಟೋನಿಯೊ

ವ್ಯಂಗ್ಯಚಿತ್ರಕಾರ ಆಂಟೋನಿಯೊ ಮೊರೆರಾ ಆಂಟ್ಯೂನ್ಸ್ ರಚಿಸಿದ್ದು, ಅಮೃತಶಿಲೆಯಲ್ಲಿ ಲೇಸರ್ ಬಳಸಿ ಕತ್ತರಿಸುವ ಮೂಲಕ ನಿರ್ಮಿಸಿದ್ದಾರೆ.

ಆಂಟೋನಿಯೊ ಪೋರ್ಚುಗಲ್‌ನ ಪ್ರಖ್ಯಾತ ವ್ಯಂಗ್ಯಚಿತ್ರಕಾರ. ಈ ಮೆಟ್ರೋ ಸ್ಟೇಷನ್‌ನಲ್ಲಿ ಸ್ಥಾಪಿಸಲು ಪೋರ್ಚುಗಲ್‌ನ ಇಪ್ಪತ್ತನೇ ಶತಮಾನದ ಪ್ರಖ್ಯಾತ ಕಲೆ ಮತ್ತು ಸಂಗೀತ ಕಲಾವಿದರು, ನಟರು, ರಾಜಕಾರಣಿಗಳು, ಕ್ರೀಡಾಪಟುಗಳು, ವೈದ್ಯರು, ಲೋಕೋಪಕಾರಿಗಳು, ಮುಂತಾದವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅವರ ಆಯ್ಕೆಯ ಮಾನದಂಡಗಳೇನು ಎನ್ನುವುದು ಆಂಟೋನಿಯೊಗೆ ಮಾತ್ರ ತಿಳಿದಿದ್ದರೂ, ಮೇಲ್ನೋಟಕ್ಕೆ ಕಾಣುವಂತೆ ಅವರಲ್ಲಿ ಬಹುಪಾಲು ಜನರು ಪೋರ್ಚುಗಲ್‌ನ ಹಿಂದಿನ ಕಮ್ಯುನಿಸ್ಟ್ ವಿರೋಧಿ ಆಂಟೋನಿಯೊ ಸಾಲಜಾರ್‌ನ ಎಸ್ಟಡೋ ನೋವೋ ಆಡಳಿತದ ವಿರೋಧಿಗಳೂ ಟೀಕಾಕಾರರೂ ಆಗಿದ್ದಾರೆ. ಅವರಲ್ಲಿ ಸಾಹಿತಿಗಳಾದ ಜೋಸ್ ಸರಮಗೊ, ಎಕಾ ದ ಕ್ವೆರೋಸ್, ಸೋಫಿಯಾದ ಮೆಲೊ ಬ್ರೆಯ್ನೆರ್, ವ್ಯಂಗ್ಯಚಿತ್ರಕಾರರಾದ ರಫೆಲ್ ಬೊರ್ಡಾಲೊ, ಸ್ಟುವರ್ಟ್ ಕರ್ವಾಲೇಸ್, ನಟರಾದ ಆಂಟೋನಿಯೊ ಸಿಲ್ವಾ, ವಾಸ್ಕೊ ಸಂತಾನ, ಸಂಗೀತಗಾರರಾದ ಕಾರ್ಲೋಸ್ ಪೆರೆಡ್ಸ್, ಮರಿಯಾ ಪೈರ್ಸ್, ವೈದ್ಯಕೀಯ ಕ್ಷೇತ್ರದಲ್ಲಿ ನೊಬೆಲ್ ಬಹುಮಾನ ಪಡೆದ ಎಗಾಸ್ ಮೋನಿಜ್, ಫುಟ್‌ಬಾಲ್ ಕ್ರೀಡಾಪಟು ಯೂಸೆಬಿಯೊ ಮುಂತಾದವರಿದ್ದಾರೆ.

‘ಸಾಧಾರಣವಾಗಿ ಕಾಗದದ ಮೇಲೆ ವ್ಯಂಗ್ಯಚಿತ್ರ ರಚಿಸುವ ನನಗೆ, ಮೊದಲ ಬಾರಿಗೆ ಅವುಗಳನ್ನು ಅಮೃತಶಿಲೆಯ ಮೇಲೆ ಲೇಸರ್ ಕಿರಣ ಬಳಸಿ ಬರೆಯುವುದು ಒಂದು ಅಸಾಧಾರಣ ಸವಾಲಾಗಿತ್ತು’ ಎನ್ನುತ್ತಾರೆ ಆಂಟೋನಿಯೊ.

ಆಂಟೋನಿಯೊ ತಮ್ಮ ವೃತ್ತಿಜೀವನವನ್ನು 1974ರಲ್ಲಿ ಲಿಸ್ಬನ್‌ನ ದಿನಪತ್ರಿಕೆ ‘ರಿಪಬ್ಲಿಕಾ’ದಲ್ಲಿ ಪ್ರಾರಂಭಿಸಿದರು. ಅದೇ ವರ್ಷ ವಾರಪತ್ರಿಕೆ ‘ಎಕ್ಸ್‌ಪ್ರೆಸ್ಸೊ’ದಲ್ಲೂ ವ್ಯಂಗ್ಯಚಿತ್ರಗಳನ್ನು ನಿಯಮಿತವಾಗಿ ಬರೆಯುವ ಒಪ್ಪಂದ ಮಾಡಿಕೊಂಡರು. ಅವರು ತಮ್ಮ ವ್ಯಂಗ್ಯಚಿತ್ರ ಕಲೆಗಾಗಿ ಹಲವಾರು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ ಮತ್ತು ವಿಶ್ವದಾದ್ಯಂತ ನೂರಾರು ಪ್ರದರ್ಶನಗಳನ್ನು ಮಾಡಿದ್ದಾರೆ.

ಆಂಟೋನಿಯೊ 1992ರಲ್ಲಿ ಪೋಪ್ ಎರಡನೇ ಜಾನ್ ಪಾಲ್‌ರವರ ವ್ಯಂಗ್ಯಚಿತ್ರ ರಚಿಸಿ ವಿವಾದಕ್ಕೂ ಕಾರಣರಾಗಿದ್ದರು. ಆ ಸಮಯದಲ್ಲಿ ಏಡ್ಸ್ ಕಾಯಿಲೆ ವ್ಯಾಪಕವಾಗಿತ್ತು. ಪೋಪ್ ಎರಡನೇ ಜಾನ್ ಪಾಲ್‌ರವರು ಉಗಾಂಡಾದ ರಾಜಧಾನಿ ಕಂಪಾಲಾಕ್ಕೆ ಭೇಟಿ ನೀಡಿದ್ದಾಗ ಏಡ್ಸ್‌ನಿಂದ ರಕ್ಷಿಸಿಕೊಳ್ಳಲು ಕ್ರೈಸ್ತ ಧರ್ಮದಲ್ಲಿ ಕಾಂಡೋಮ್ ಬಳಸಲು ಅವಕಾಶವಿಲ್ಲವೆಂದೂ, ಏಡ್ಸ್ ವೈರಸ್ ಹರಡುವುದನ್ನು ತಡೆಯಲು ಲೈಂಗಿಕ ಕ್ರಿಯೆಯಿಂದಲೇ ದೂರವಿರಬೇಕೆಂದು ಹೇಳಿದ್ದರು. ಆಗ ಆಂಟೋನಿಯೊ ಪೋಪ್ ಎರಡನೇ ಜಾನ್ ಪಾಲ್‌ರವರ ಮೂಗಿಗೆ ಕಾಂಡೊಮ್ ಧರಿಸಿರುವಂತೆ ವ್ಯಂಗ್ಯಚಿತ್ರ ರಚಿಸಿದ್ದರು. ಆ ಚಿತ್ರ ಪೋರ್ಚುಗಲ್‌ನಲ್ಲಿ ವಿವಾದಕ್ಕೆ ಕಾರಣವಾಯಿತು. ಸುಮಾರು ಇಪ್ಪತ್ತು ಸಾವಿರ ಜನ ಸಹಿ ಮಾಡಿ ಆ ವ್ಯಂಗ್ಯಚಿತ್ರ ನಿಷೇಧಿಸಲು ಒತ್ತಾಯಿಸಿದರು. ವಿವಾದ ಪಾರ್ಲಿಮೆಂಟ್‌ನಲ್ಲೂ ಚರ್ಚೆಗೊಳಗಾಯಿತು. ಆ ವ್ಯಂಗ್ಯಚಿತ್ರ ನಿಷೇಧಕ್ಕೂ ಒಳಗಾಗಲಿಲ್ಲ ಹಾಗೂ ವ್ಯಂಗ್ಯಚಿತ್ರಕಾರ ಬಹಿಷ್ಕಾರಕ್ಕೂ ಒಳಗಾಗಲಿಲ್ಲ. ಬದಲಿಗೆ ಏರ್‌ಪೋರ್ಟ್ ಮೆಟ್ರೋ ನಿಲ್ದಾಣದಲ್ಲಿ ಶಾಶ್ವತ ವ್ಯಂಗ್ಯಚಿತ್ರಗಳನ್ನು ರಚಿಸಲು ಸರ್ಕಾರ ಆಂಟೋನಿಯೊ ಅವರನ್ನು ಆಹ್ವಾನಿಸಿತು.

ಬೆಂಗಳೂರಿನಲ್ಲೂ ಮೆಟ್ರೋ ಇದೆ. ‘ನಮ್ಮ ಮೆಟ್ರೋ’ಗೆ ಲಿಸ್ಬನ್ ಮೊಗಸಾಲೆ ಯಾಕೆ ಮಾದರಿಯಾಗಬಾರದು?